*MVC No: 4436/2022*
*C/w 4435/2022*
*PW-3*

**ಸಾಕ್ಷಿಗೆ ದಿನಾಂಕ 27-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ *2* ನೇ ಎದುರುದಾರರ ಪರ ಶ್ರೀ. ವಿ ಎಸ್ ಎನ್ ವಕೀಲರಿಂದಃ**

1. ಅರ್ಜಿದಾರರಿಗೆ ನಾನು ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದ ನನ್ನ ಸಹೋದ್ಯೋಗಿ ಡಾ. ರಾಕೇಶ್ ರವರು ಚಿಕಿತ್ಸೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬರುವುದಕ್ಕಿಂತ ಮುಂಚೆ ಬೇರೆ ಆಸ್ಪತ್ರೆಗೆ ಹೋಗಿದ್ದರಾ ಎಂದರೆ ಆರ್ ಎಲ್ ಜಾಲಪ್ಪ ಆಸ್ಪತ್ರೆಗೆ ಹೋಗಿದ್ದರು. ಆರ್ ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ಔಪಚಾರಿಕ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಅದರ ಬಗ್ಗ ಮಾಹಿತಿ ಇರುವುದಿಲ್ಲ.

2. ಅರ್ಜಿದಾರರು ಆರ್ ಎಲ್ ಜಾಲಪ್ಪ ಆಸ್ಪತ್ರೆಯಿಂದ ಬರುವಾಗ ಗಾಯಕ್ಕೆ ಬ್ಯಾಂಡೇಜ್ ಪಟ್ಟಿ ಹಾಕಿಕೊಂಡಿದ್ದರು ಎಂದರೆ ಸರಿ, ಸದರಿ ಬ್ಯಾಂಡೇಜ್ ಪಟ್ಟಿಯನ್ನು ನಮ್ಮ ಆಸ್ಪತ್ರೆಯಲ್ಲಿ ತೆಗೆದಿರುತ್ತೇವೆ ಎಂದರೆ ಸರಿ. ಅರ್ಜಿದಾರಳು ಆಸ್ಪತ್ರೆಗೆ ದಾಖಲಾದ 12 ಗಂಟೆಯೊಳಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂದರೆ ಸರಿ. ಅರ್ಜಿದಾರಳಿಗೆ ಒಳಜೋಡಣೆ ಹಾಕಿದ ನಂತರ ಎಕ್ಸ್ ರೇ ತೆಗೆಯಲಾಗಿದೆ ಎಂದರೆ ಸರಿ. ಎಕ್ಸ್-ರೇ ಪರಶೀಲಿಸಿದ ನಂತರ ಅರ್ಜಿದಾರಳ ಮೂಳೆ ಸರಿಯಾದ ಜಾಗಕ್ಕೆ ಕೂಡಿಸಲಾಗಿದೆ ಎಂದರೆ ಸರಿ. ಅರ್ಜಿದಾರಳ ಎಡಗಾಲಿನ ಮಧ್ಯದ 1/3 ನೇ ಭಾಗದಲ್ಲಿ ಮೂಳೆಮುರಿತ ಉಂಟಾಗಿದೆ ಎಂದರೆ ಸರಿ. ಎರಡು ಮೂಳೆಮುರಿತಗಳನ್ನು ಸಾಮಾನ್ಯ ಸ್ಥಿತಿಗೆ ತರಲಾಗಿದೆ ಎಂದರೆ ಸರಿ. ಟಿಬಿಯಾ ಮತ್ತು ಫಿಬೂಲ ಮೂಳೆಮುರಿತ ಕೂಡಿಕೊಂಡಿದೆ ಎಂದರೆ ಸರಿ. ಟಿಬಿಯಾ ಮೂಳೆಗೆ ಮಾತ್ರ ಒಳಜೋಡಣೆ ಹಾಕಲಾಗಿರುತ್ತದೆ.

3. ಫಿಬೂಲ ಮೂಳೆಗೆ ಸಾಮಾನ್ಯ ಸ್ವರೂಪದ ಚಿಕಿತ್ಸೆ ನೀಡಲಾಗಿರುತ್ತದೆ ಎಂದರೆ ಸರಿ. ಟಿಬಿಯಾ ಮೂಳೆ ಮುರಿತ ಕೂಡಿಕೊಳ್ಳಲು 10-12 ವಾರಗಳ ಕಾಲ ಅವಧಿ ಬೇಕಾಗುತ್ತದೆ. ಇತ್ತೀಚಿಗೆ ಅರ್ಜಿದಾರಳನ್ನು ಪರೀಕ್ಷಿಸಿದಾಗ ಯಾವುದೇ ನಂಜು ಕಂಡು ಬಂದಿರುವುದಿಲ್ಲ ಎಂದರೆ ಸರಿ.

ಅರ್ಜಿದಾರಳಿಗೆ ಭೌತಿಕ ಚಿಕಿತ್ಸೆ ಪಡೆಯಲು ಸಲಹೆ ನೀಡಿರುತ್ತೇವೆ ಎಂದರೆ ಸರಿ. ಅರ್ಜಿದಾರಳಿಗೆ ಸೂಕ್ತವಾದ ವ್ಯಾಯಾಮ ಹೇಳಿಕೊಟ್ಟಿರುತ್ತೇವೆ ಎಂದರೆ ಸರಿ. ಅರ್ಜಿದಾರಳಿಗೆ ಯಾವುದೇ ನರರೋಗ ಇರುವುದಿಲ್ಲ ಎಂದರೆ ಸರಿ.

4. ಅರ್ಜಿದಾರಳ ಒಳಜೋಡಣೆ ಹಾಗೆಯೇ ಇರುತ್ತದೆ. ಅರ್ಜಿದಾರಳ ಒಳಜೋಡಣೆ ತೆಗೆಯಬಹುದು. ಅರ್ಜಿದಾರಳ ಒಳಜೋಡಣೆ ತೆಗೆದ ನಂತರ ಭೌತಿಕ ಚಿಕಿತ್ಸೆ ಪಡೆದರೆ ಅರ್ಜಿದಾರಳ ಚಲನ-ವಲನ ಸಾಮಾನ್ಯವಾಗುವುದು ಎಂದರೆ ಸರಿಯಲ್ಲ. ಅರ್ಜಿದಾರಳು ನಮ್ಮ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಪುನಃ ಮುಂದುವರೆದ ಚಿಕಿತ್ಸೆಗೆ ನಮ್ಮ ಬಳಿ ಬಂದಿರುವುದಿಲ್ಲ ಎಂದರೆ ಸರಿ. ಇತ್ತೀಚಿಗೆ ಅರ್ಜಿದಾರಳನ್ನು ಪರೀಕ್ಷಿಸಿದ ನಂತರ ಯಾವುದೇ ತೊಂದರೆ ಇಲ್ಲದ ಕಾರಣ ಮುಂದುವರೆದ ಚಿಕಿತ್ಸೆಗೆ ಸಲಹೆ ನೀಡಿರುವುದಿಲ್ಲ. ಅರ್ಜಿದಾರಳಿಗೆ ಚಲನ-ವಲನ ಮತ್ತು ಸಾಮರ್ಥ್ಯಕ್ಕೆ ನೀಡಲಾದ ಅಂಕಗಳು ಸರಿಯಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳ ಮಾಂಸಖಂಡ ಮತ್ತು ಶಕ್ತಿ ಸಾಮಾನ್ಯವಾಗಿದೆ ಎಂದರೆ ಸರಿ. ಅರ್ಜಿದಾರಳ ನಿಗಧಿತ ಅಂಗಕ್ಕೆ ನೀಡಲಾದ ಅಂಗನ್ಯೂನತೆಯಾ ಶೇಕಡಾ ½ ರಷ್ಟು ಭಾಗವನ್ನು ಸಂಪೂರ್ಣ ದೇಹಕ್ಕೆ ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ಅರ್ಜಿದಾರಳಿಗೆ ನೀಡಲಾದ ಅಂಗನ್ಯೂನತೆ ಅತೀ ಹೆಚ್ಚಿನಿಂದ ಕೂಡಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**